ಚುಂಯ್ ಎಂದು ಸದ್ದುಗರೆಯುತ್ತ ತಟ್ಟೆಯಲ್ಲಿದ್ದ ಪಕೋಡದ ಘಮಲು ಈ ನಡುಮನೆಗೂ ಧಾವಿಸಿ ನಾಲಿಗೆಯನ್ನ ಚುರುಕಾಗಿಸಿ ಮೂಗಿನ ತುಂಬ ವಾಸನೆ ತುಂಬಿ ಹೊಟ್ಟೆಯನ್ನ ಕೆರಳಿಸಿ, ಒಳಗಿದ್ದ ಮಗುವಿಗೂ ಅದು ತಲುಪಿತೇ?

ಉಲ್ಲನ್ ಉಂಡೆ, ಕಡ್ಡಿ, ಟೋಪಿಯ ತುಂಡು ಎಲ್ಲವನ್ನು ಆ ಗೂಡಲ್ಲಿರಿಸಿ, ಮಬ್ಬು ಬೆಳಕಿಗೆ ಕಣ್ಣು ಹೊಂದಿಸಿಕೊಂಡು ವಾಸನೆ ಹೊತ್ತು ಬಂದ ಗಾಳಿಯನ್ನೇ ಕಣ್ಣಾಗಿಸಿಕೊಂಡು ಜಾನಕಿ ಅಡುಗೆಮನೆಯನ್ನು ಸೇರಲು ಅವಸರಿಸಿದಳು. ರಾಜಾರಾಯರು ಮಲಗಿದ್ದಲ್ಲೇ ಮಗ್ಗುಲಾದರು. ಅಲ್ಲೇ ಹೆಂಚಿನ ಮಾಡಿನಲ್ಲಿ ಓಡಾಡುತ್ತಿದ್ದ ಇಲಿಯೊಂದು ವಾಸನೆಗೆ ಹಿಗ್ಗಿ ತನ್ನ ಓಡಾಟವನ್ನ ತೀವ್ರಗೊಳಿಸಿದಾಗ, ಹೆಂಚಿನ ಸದ್ದು ರಾಜಾರಾಯರಿಗೆ ಮಂಪರಿನಲ್ಲೂ ಕೇಳಿ, ಈ ಇಲಿಗಳ ಕಾಟಕ್ಕೆ ಸಿಟ್ಟು ಬಂದು 'ಇವತ್ತು ರಾತ್ರಿ ಮತ್ತೆ ಇಲಿ ಬೋನು ಇಡಬೇಕು. ಇಲಿ ಪಾಷಾಣ ಹಾಕಿದರೆ, ಯಾವುದೋ ಸಂದಿಯಲ್ಲಿ ಸತ್ತು ಮನೆಯೆಲ್ಲ ಹೆಣದ ವಾಸನೆ ಬೀರುತ್ತದೆ. ಒಂದೆರಡು ಪಕೋಡ ಬೋನಿಗೆ ಹಾಕಿ ಅದರ ಕೊಕ್ಕೆಗೆ ಒಣ ಕೊಬ್ಬರಿ ಸುಟ್ಟು ಬಲವಾಗಿ ಸಿಕ್ಕಿಸಬೇಕು. ಇಲ್ಲವಾದರೆ ಕಳ್ಳ ಇಲಿಗಳು ಸಿಕ್ಕಿಸಿದ ಕೊಬ್ಬರಿ ಚೂರು ತಿಂದು, ಬೋನಿನಲ್ಲಿ ಹಾಕಿದ್ದ ತಿಂಡಿ ತಿಂದು ಇಡೀ ಬೋನನ್ನೆ ಬೋಳಿಸಿ ಬಿಡುತ್ತವೆ...' ಎಂದು ಯೋಚಿಸುತ್ತಿದ್ದಾಗ, ಅಲ್ಲಿ ಸುತ್ತಿ ಸುಳಿದ ಪಕೋಡದ ವಾಸನೆ ಇವರ ಇಲಿ ಸಂಹಾರಕ್ಕೆ ಒಂದು ಹೊಸ ಆಶ್ವಾಸನೆಯನ್ನ ನೀಡಿತು.

ಈ ಇಲಿಯ ಸದ್ದಿಗೆ ಅಡುಗೆಮನೆಯಿಂದ ಹಿತ್ತಲಿಗೆ, ಹಿತ್ತಲಿನಿಂದ ಅಡುಗೆಮನೆಗೆ ಠಳಾಯಿಸತ್ತಿದ್ದ ಬೆಕ್ಕಿಗೆ ಮೊದಲು ಪಕೋಡವೋ? ಅಥವಾ ಇಲಿಯೋ? ಯಾವುದು ಮೊದಲು ತನ್ನ ಬಾಯಿಗೆ ಬೀಳುವುದು ಎಂದು ಮೀಗರೆದು ನಾಲಿಗೆಯಿಂದ ತನ್ನ ಮೀಸೆಯನ್ನ ನೇವರಿಸಿಕೊಂಡಿತು. ಬೆಕ್ಕಿನ ಸದ್ದು ಇಲಿಗೆ ಮಾಮೂಲು. ಅದಕ್ಕೆ ಹೆದರಿ ಜೀವಿಸಲಾದೀತೆ? ಅದರ ಕೂಗು ಅದಕ್ಕೆ ನನ್ನ ಪಕೋಡ ನನಗೆ ಎಂದು ಧೈರ್ಯ ತಂದುಕೊಂಡು ಇಲಿ ಅಡುಗೆಮನೆಯ ಮಾಡಿನಿಂದ ಸುಮ್ಮನೆ ಒಲೆಯ ಮೇಲೆ ಇಣುಕಿತು. ಅದೇ ಮಾಡಿನಲ್ಲಿ ಜೇಡ ಬಲೆ ಹೆಣೆದು ತುದಿಯಲ್ಲಿ ಆಹಾರಕ್ಕಾಗಿ ಕಾಯುತ್ತ ಕೂತಿತ್ತು. ಆಗಾಗ ಗಾಳಿಗೆ ಅಲ್ಲಾಡುತ್ತಿದ್ದ ಜೇಡನ ಬಲೆಯ ಬಳಿಯೇ ನೊಣವೊಂದು ಗುಂಯ್ ಎಂದು ಸದ್ದುಗರೆಯುತ್ತ ಪಕೋಡದ ವಾಸನೆಗೆ ಮರುಳಾಗಿ ತಟ್ಟೆಯಲ್ಲಿ ತೆಗೆದಿರಿಸಿದ್ದ ಪಕೋಡದ ಬಳಿ ಸುತ್ತಿ ಸುಳಿದು ಅದರ ಬಿಸಿಯನ್ನ ಹಬೆಯಿಂದ ಗುರುತಿಸಿ ಕೇವಲ ವಾಸನೆಯಿಂದಲೇ ಸದ್ಯಕ್ಕೆ ತೃಪ್ತಿ ಪಟ್ಟು, ಆದರೆ ಹಸಿವನ್ನು ಕೆರಳಿಸಿಕೊಂಡು ಯದ್ವಾತದ್ವಾ ಹಾರಾಡುತ್ತ ಛಕ್ ಎಂದು ಜೇಡನ ಬಲೆಗೆ ಸಿಕ್ಕಿಕೊಂಡಿತು. ಅಲ್ಲೇ ಒದ್ದಾಡುತ್ತಾ ಬಿಡಿಸಿಕೊಳ್ಳಲು ಹೋರಾಡುತ್ತಿದ್ದಾಗ ಜೇಡ ಬಂದು ನೊಣದ ಸುತ್ತ ಪಾಶದಂಥ ಬಲೆಯ ಎಳೆಯನ್ನ ನೇಯುತ್ತ ನೇಯುತ್ತ, ನೊಣ ಪಕೋಡದ ವಾಸನೆಯನ್ನು ತನ್ನ ಕೊನೆಯ ಆಸೆ ಎಂಬಂತೆ ಹೀರುತ್ತ ಹೀರುತ್ತ ತನ್ನ ಪ್ರಾಣವ ಬಿಟ್ಟಿತು.

## 2

ಜಾನಕಿಯ ಅಜ್ಜಿ ರಾಜಾರಾಯರ ತಾಯಿ ತುಂಗಕ್ಕ ಹಿತ್ತಲಿನಲ್ಲಿ ತನ್ನ ಸೀರೆ ಒಣಹಾಕಿತ್ತು. ಅಲ್ಲೇ ಮಲ್ಲಿಗೆ ಚಪ್ಪರದಲ್ಲಿದ್ದ, ಚಪ್ಪರದ ತುಂಬ ಹರಡಿಕೊಂಡಿದ್ದ ಮಲ್ಲಿಗೆ ಹೂಗಳನ್ನು ಬಿಡಿಸುತ್ತ ಸೂರ್ಯನ ಸಂಜೆ ಬೆಳಕಿಗೆ ಅರಳುವ ಮಲ್ಲಿಗೆಯ ಕಂಪನ್ನ ಹೀರುತ್ತ, ವಿಧವೆಯಾದ, ತನ್ನ ಜಡೆಯನ್ನು ನೇವರಿಸಿಕೊಂಡು 'ಇನ್ನೆಲ್ಲಿ ಈ ಜಡೆಗೆ ಮಲ್ಲಿಗೆ ಮುಡಿಯುವ ಸೌಭಾಗ್ಯ? ಹೋದ್ನಲ್ಲ ಮಾರಾಯ ಎಲ್ಲ ಮುಗಿಸಿಕೊಂಡು' ಎಂದು ತನ್ನ ಗಂಡನನ್ನು ಬೈದುಕೊಂಡಿತು. ಅಲ್ಲೇ ಇದ್ದ ಬುಟ್ಟಿಗೆ ಹೂಗಳನ್ನು ಹಾಕಿತು. ಆ ಹೊತ್ತಿಗಾಗಲೇ ಸೂರ್ಯ ಅಂಬೆಗಾಲಿಡುತ್ತ ಅಡುಗೆಯ ಮನೆಯಿಂದ ಹಿತ್ತಲಿಗೆ ಬರುತ್ತಿದ್ದ.

ಬೆಚ್ಚನೆಯ ಗಾಳಿ ಮಲ್ಲಿಗೆಯ ಚಪ್ಪರದ ಮೇಲೆ ಹಾಯ್ದು, ಬಿರಿಯುವ ಮೊಗ್ಗನ್ನ ಸೂರ್ಯ ತನ್ನ ಕಿರಣಗಳ ಕೈಯಿಂದ ಮೆಲ್ಲ ಮೆಲ್ಲಗೆ ಬಿಡಿಸಿ ಅರಳಿಸುತ್ತ ಅದಕ್ಕೊಂದಿಷ್ಟು ಬೆಚ್ಚನೆಯ ಬಿಸುಪನ್ನ ನೀಡಿದ. ಆ ಕಂಪನ್ನ ಗಾಳಿ ಹೊತ್ತು ಊರ ತುಂಬಾ ಹಾರಾಡಿ, ಸುತ್ತಮುತ್ತಿಗೆಲ್ಲ ತಾಗಿಸುತ್ತಿದ್ದಾಗ ಚಿಟ್ಟೆಯೊಂದು ಹಾರಿ ಬಂದು, ತುಂಗಕ್ಕನ ಹರವಿದ್ದ ಸೀರೆಯ ಮೇಲೆ ಕೂತು, ಮಲ್ಲಿಗೆಯ ಬಳ್ಳಿಗೆ ಧಾವಿಸಿ, ಅರಳಿದ ಮಲ್ಲಿಗೆಯ ಮೇಲೆ ಕುಳಿತು ಸುಮ್ಮಾನದಿಂದ ತನ್ನ ರೆಕ್ಕೆಯನ್ನ ಅಗಲಿಸಿ–ಮುಚ್ಚಿ ಹೂವಿನ ಪರಾಗವನ್ನ ತನ್ನ ರೆಕ್ಕೆಗೆ ಪೂಸಿಕೊಂಡು ಮತ್ತೆ ಮತ್ತೆ ಆ ದಳದೊಂದಿಗೆ ಆಡುತ್ತ ರೆಕ್ಕೆಯನ್ನ ಹರಡಿ ಹಾಸಿ, ಮುಚ್ಚಿ ಹೂವನ್ನ ಮರೆಮಾಚುತ್ತ, ಅರಿಶಿಣದಂತೆ ಬಳಿದುಕೊಂಡು ವಾಸನೆಗೆ ಮತ್ತಾಗಿ ಇನ್ನೊಂದು ಹೂವಿಗೆ ಹಾರಿ ಕುಳಿತಿತು.

